# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ , ಹಿರಿಯೂರು

## ಸಿ ಸಿ ನಂ.899/2020

| | | | |
|---|---|---|---|
| ಹೆಸರು | - | ಚನ್ನೇಗೌಡ | CW-14<br>PW-6 |
| ತಂದೆ ಹೆಸರು | - | ಗಂಗಪ್ಪ | |
| ವಯಸ್ಸು | - | 46 ವರ್ಷ | |
| ಉದ್ಯೋಗ | - | ಪಿ ಐ ವಿಶೇಷ ಶಾಖೆ ಬೆಂಗಳೂರು ನಗರ | |
| ವಾಸಸ್ಥಳ | - | ಬೆಂಗಳೂರು | |

ದಿನಾಂಕಃ17.02.2026 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ನಾನು ದಿಃ05.03.2019 ರಿಂದ 09.03.2020 ರವರೆಗೆ ಹಿರಿಯೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿಃ29.04.2019 ರಂದು ಈ ಪ್ರಕರಣದ ಕಡತವನ್ನು ಚಾಸಾ.13 ರವರಿಂದ ಪಡೆದು ತನಿಖೆ ಮುಂದುವರೆಸಿರುತ್ತೇನೆ. ಅದೇ ದಿನ ಅಮಾನತ್ತು ಪಡಿಸಿಕೊಂಡ ವಾಹನಗಳನ್ನು ಐ ಎಂ ವಿ ತಪಾಸಣೆಗಾಗಿ ಆರ್ ಟಿ ಒ ಚಿತ್ರದುರ್ಗ ಇವರಿಗೆ ಮನವಿ ಸಲ್ಲಿಸಿಕೊಂಡಿರುತ್ತೇನೆ.

ದಿಃ02.05.2019 ರಂದು ಈ ಪ್ರಕರಣದ ಕೆಎ 38 4167 ರ ಲಾರಿಯ ಮಾಲಿಕರಾದ ಚಾಸಾ.11 ರವರಿಗೆ 133 ರಂತೆ ನೋಟಿಸ್ ನೀಡಿರುತ್ತೇನೆ. ಸದರಿ ನೋಟಿಸನ್ನು ನಿಪಿ-8 ಎಂದು ಸಹಿಯನ್ನು ನಿಪಿ-8 ಎ ಎಂದು ಗುರುತಿಸಲಾಯಿತು. ಚಾಸಾ.11 ರವರು ಆ ದಿನ ಆರೋಪಿ ಲಾರಿ ಚಾಲನೆ ಮಾಡುತ್ತಿದ್ದರು ಎಂದು ಉತ್ತರ ನೀಡಿರುತ್ತಾರೆ. ಉತ್ತರವನ್ನು ನಿಪಿ-9 ಎಂದು ಸಹಿಯನ್ನು ನಿಪಿ-9 ಎ ಎಂದು ಗುರುತಿಸಲಾಯಿತು. ಆರೋಪಿಯನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಆರೋಪಿಯನ್ನುನೋಡಿದರೆ ಗುರುತಿಸುತ್ತೇನೆ. ಆರೋಪಿ ಗುರುತಿನ ಬಗ್ಗೆ ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿ ಯಾವುದೇ ತಕರಾರು ಇಲ್ಲ ಎಂದು ನುಡಿದಿರುತ್ತಾರೆ. ಚಾಸಾ.11 ರವರು ಇಂಡಮ್ನಿಟಿ ಬಾಂಡ್ ನೀಡಿ ವಾಹನವನ್ನು ತಮ್ಮ

ವಶಕ್ಕೆ ಪಡೆದಿರುತ್ತಾರೆ. ಇಂಡಮ್ನಿಟಿ ಬಾಂಡನ್ನು ನಿಪಿ-10 ಎಂದು ಸಹಿಯನ್ನು ನಿಪಿ-10ಎ ಎಂದು ಗುರುತಿಸಲಾಯಿತು.

ದಿಃ 24.05.2019 ರಂದು ಕೆಎ 44 ಯು 9046 ಮೋಟರ್ ಸೈಕಲ್ ಮಾಲೀಕರಾದ ಧನಂಜಯ್ ರವರಿಂದ ಇಂಡಿಮ್ನಿಟಿ ಬಂಡ್ ಪಡೆದು ವಾಹನ ಬಿಡುಗಡೆ ಮಾಡಿರುತ್ತೇನೆ. ಇಂಡಮ್ನಿಟಿ ಬಾಂಡನ್ನು ನಿಪಿ- 11 ಸಹಿಯನ್ನು ನಿಪಿ-11ಎ ಎಂದು ಗುರುತಿಸಲಾಯಿತು. ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.15 ರವರಿಗೆ ವಹಿಸಿಕೊಟ್ಟಿದ್ದೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಸಿ ಕೆ ವಕೀಲರಿಂದಃ</u>

ದಿಃ29.04.2019 ರಂದು ಈ ಪ್ರಕರಣದ ಕಡತವನ್ನು ಚಾಸಾ.13 ರವರಿಂದ ಪಡೆದು ಕೊಂಡಿಲ್ಲ ಎಂದರೆ ಸರಿಯಲ್ಲ. ಅದೇ ದಿನ ಅಮಾನತ್ತು ಪಡಿಸಿಕೊಂಡ ವಾಹನಗಳನ್ನು ಐ ಎಂ ವಿ ತಪಾಸಣೆಗಾಗಿ ಆರ್ ಟಿ ಒ ಚಿತ್ರದುರ್ಗ ಇವರಿಗೆ ಮನವಿ ಸಲ್ಲಿಸಿಕೊಂಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ,

ದಿಃ02.05.2019 ರಂದು ಈ ಪ್ರಕರಣದ ಕೆಎ 38 4167 ರ ಲಾರಿಯ ಮಾಲಿಕರಾದ ಚಾಸಾ.11 ರವರು ಠಾಣೆಗೆ ಹಾಜರಾಗಿಲ್ಲ ಅವರಿಗೆ 133 ರಂತೆ ನೋಟಿಸ್ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ.11 ರವರು ಆ ದಿನ ಆರೋಪಿ ಲಾರಿ ಚಾಲನೆ ಮಾಡುತ್ತಿದ್ದರು ಎಂದು ಉತ್ತರ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿಲ್ಲ ಎಂದರೆ ಸರಿಯಲ್ಲ. ಚಾಸಾ.11 ರವರು ಇಂಡಮ್ನಿಟಿ ಬಾಂಡ್ ನೀಡಿಲ್ಲ ವಾಹನವನ್ನು ಅವರ ವಶಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ.

ದಿಃ 24.05.2019 ರಂದು ಕೆಎ 44 ಯು 9046 ಮೋಟರ್ ಸೈಕಲ್ ಮಾಲೀಕರಾದ ಧನಂಜಯ್ ರವರು ಇಂಡಿಮ್ನಿಟಿ ಬಂಡ್ ನೀಡಿಲ್ಲ ಎಂದರೆ ಸರಿಯಲ್ಲ. ಸದರಿ ವಾಹನ

ಬಿಡುಗಡೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. . ಮುಂದಿನ ತನಿಖೆಗಾಗಿ ಕಡತವನ್ನು ಚಾಸಾ.15 ರವರಿಗೆ ವಹಿಸಿಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು